# ಪ್ರೀತಿ ಪ್ರೇಮ ಪ್ರಣಯವೇ ಆಧಾರ



## ದೀಪಕ್

**ಉದಯದ 'ನಾಯಕಿ'ಯ ಸಿದ್ದಾರ್ಥ**

◆ **ನೀವು ಸಾಮಾಜಿಕ ಮಾಧ್ಯಮಗಳಲ್ಲಿ ಲೈವ್ ಬರುವ ಉದ್ದೇಶ ಏನು?**

ನಾನು ಇನ್‌ಸ್ಟಾಗ್ರಾಮ್ ಲೈವ್ ಇತ್ತೀಚೆಗಷ್ಟೇ ಬಂದಿದ್ದೆ. ಲಾಕ್‌ಡೌನ್ ಹಿನ್ನೆಲೆಯಲ್ಲಿ ಸಾಮಾಜಿಕ ಬದುಕಿಲ್ಲದೆ ಜನ ಖಿನ್ನರಾಗಿದ್ದಾರೆ. ಇಲ್ಲವೆ ಏನೋ ಬೇಸರದಿಂದ ಕೊರಗುತ್ತಿದ್ದಾರೆ. ಅವರ ಜೊತೆ ಒಂದಿಷ್ಟು ಹೊತ್ತು ಮಾತನಾಡಿ ಅವರ ಜೊತೆ ಭಾವನೆಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದರಿಂದ ಅವರ ಬೇಸರ ಕಳೆಯುವ ಪ್ರಯತ್ನವನ್ನು ನಾವು ಮಾಡಿದ್ದೇವೆ. ಹೇಗಿದ್ದರೂ ಈಗ ಮನೆಯವರ ಜೊತೆ ಸಮಯವನ್ನು ಕಳೆಯುವ ಅವಕಾಶ ಎಲ್ಲರಿಗೂ ಸಿಕ್ಕಿದೆ. ಕುಟುಂಬದವರ ಜೊತೆ ಇದ್ದರೆ ಆಯಿತು. ಆದರೆ ಬಹುತೇಕರು ಆಚೆ ಹೋಗಲು ಆಗುವುದಿಲ್ಲ. ಬೇಕಾಗಿದ್ದನ್ನು ತಿನ್ನಲು ಆಗುತ್ತಿಲ್ಲ ಎನ್ನುವ ಮಾತುಗಳನ್ನು ಹೇಳಿದ್ದಾರೆ. ತಿನ್ನಲು ಆಚೆ ಹೋಗುವ ಅಗತ್ಯವೇ ಇಲ್ಲ. ಮನೆಯಲ್ಲಿಯೇ ಬೇಕಾಗಿದ್ದನ್ನು ಮಾಡಿಕೊಂಡು ತಿನ್ನಬಹುದು. ನಾನೂ ಕೂಡ ಮನೆಯಲ್ಲಿಯೇ ಇಷ್ಟವಾಗಿದ್ದನ್ನು ಮಾಡಿಸಿಕೊಂಡು ತಿಂದಿದ್ದೇನೆ. ಅಂಗಡಿ ತಿಂಡಿಗಿಂತ ಮನೆಯ ತಿಂಡಿ ಶುಚಿಯಾಗಿರುತ್ತದೆ. ಅಗತ್ಯ ವಸ್ತುಗಳು ಎಲ್ಲಾ ಸಿಗುತ್ತವೆ. ಪಾನಿಪೂರಿ ಬೇಕೋ– ಬೇಕರಿ ತಿನಿಸುಬೇಕೋ ಅದೆಲ್ಲವನ್ನೂ ಮಾಡಲು ಸಾಧ್ಯ ಎನ್ನುವುದನ್ನು ಚರ್ಚಿಸಿದ್ದೇನೆ. ಜೊತೆಗೆ ನಮ್ಮ ಖಾಸಗಿ ಹಾಗೂ ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ಮಾತನಾಡಿದ್ದಿದೆ.

◆ **ಈ ಮೊದಲು ನೀವು ಏನು ಮಾಡ್ತಾ ಇದ್ರಿ?**

ಐಬಿಎಂನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಮೂಲತಃ ಟೆಕ್ಕಿ. ಅಲ್ಲಿ ಕೆಲಸ ಮಾಡುವಾಗ ನಿರ್ದೇಶಕ ವಿನೋದ್ ದೊಂಡಾಳೆ ಫೇಸ್ ಬುಕ್‌ನಲ್ಲಿ ನನ್ನ ಫೋಟೊ ನೋಡಿ ಆಹ್ವಾನ ನೀಡಿದರು. ಆಸಕ್ತಿ ಇದ್ದರೆ ಆಡಿಷನ್ ಕೊಡಿ ಎನ್ನುವ ಅವರ ಮುಕ್ತ ಆಹ್ವಾನಕ್ಕೆ ಗೌರವಕೊಡಬೇಕೆಂದು ನಾನು ಹೋಗಿ ಆಡಿಷನ್ ನೀಡಿದೆ. ನನಗೆ ಈ ಕ್ಷೇತ್ರ ಹೊಸತು, ಏನೂ ಗೊತ್ತಿರಲಿಲ್ಲ ಎಂದೇ ಆಡಿಷನ್ ಕೊಟ್ಟೆ. ಅವರು ಕೇಳಿದ್ದನ್ನು ನನಗೆ ಬಂದಂತೆ ಮಾಡಿದೆ. ನಂತರ ನನಗೆ ಗೊತ್ತಾದಷ್ಟು ಮಾಡಿದ್ದೇನೆ. ಮುಂದಿನದು ನಿಮಗೆ ಬಿಟ್ಟಿದ್ದು ಎಂದು ಹೇಳಿದೆ. ಸರಿ ಇಷ್ಟು ಮಾಡಿದರೆ ಸಾಕು ಮಿಕ್ಕಿದ್ದೆಲ್ಲಾ ಕಲಿಯಬಹುದು ಎನ್ನುವ ಭರವಸೆಯನ್ನು ವಿನೋದ್ ಸರ್ ನೀಡಿದರು. ಆಯ್ಕೆ ಆಗಿದ್ದೀರೋ ಇಲ್ಲವೋ ಎನ್ನುವುದು ಹತ್ತು ದಿನದಲ್ಲಿ ಗೊತ್ತಾಗುತ್ತದೆ ಎಂಬ ಮಾಹಿತಿಯನ್ನು ತಿಳಿಸಿದ್ದರು. ಒಂದು ವಾರದಲ್ಲಿ ಆಯ್ಕೆಯಾಗಿರುವುದಾಗಿ ಮಾಹಿತಿ ಬಂತು. 'ನಾ ನಿನ್ನ ಬಿಡಲಾರೆ' ಮೊದಲ ಧಾರಾವಾಹಿ ಮಾಡಿದೆ ಅದಾದ ಮೇಲೆ ಇದು.

◆ **ವೃತ್ತಿ ಬದಲಾವಣೆ ನಿಮ್ಮಲ್ಲಿ ಎಂತಹ ಬದಲಾವಣೆ ತಂದಿದೆ?**

ಟೆಕ್ಕಿ ಜೀವನ ಹೇಗಿರುತ್ತದೆ ಎಂದರೆ, ಕೆಲಸಕ್ಕೆ ಹೋಗಿ ಮನೆಗೆ ಬರುವುದೇ ಒಂದು ಸಾಹಸದಂತೆ ಆಗುತ್ತದೆ. ಕಾರ್ಪೊರೇಟ್ ಜಗತ್ತಿನಲ್ಲಿ ಬೇರೆ ಬೇರೆ ದೇಶ– ಭಾಷೆಯ ಜನರ ನಡುವೆ ಕೆಲಸ ಮಾಡುತ್ತಿರುತ್ತೇವೆ. ಅಲ್ಲಿ ನಮ್ಮ ಕೆಲಸದಿಂದಲೇ ನಮಗೆ ಮಾನ್ಯತೆ ಸಿಗುತ್ತದೆ ಎಂದು ಹೇಳಲು ಆಗುವುದಿಲ್ಲ. ನಮ್ಮ ಬಾಸ್ ಬಿಹಾರಿಯಾಗಿದ್ದರೆ ನಮ್ಮ ತಂಡದಲ್ಲಿ ಯಾರಾದರೂ ಬಿಹಾರಿ ಇದ್ದರೆ ಅವರಿಗೆ ಪ್ರಾಶಸ್ತ್ಯ ಹೆಚ್ಚು ಸಿಗುತ್ತದೆ. ಅಂತೆಯೇ ಬೇರೆ ಬೇರೆ ರಾಜಕಾರಣವೂ ಇರುತ್ತವೆ. ಅಂತಹ ವಾತಾವರಣದಲ್ಲಿ ದೀಪಕ್ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಕೆಲವರಿಗೆ ಗೊತ್ತಿತ್ತು. ಬಿಟ್ಟರೆ ನಮ್ಮ ಮನೆ ನೆರೆಯವರು, ಸಂಬಂಧಿಗಳು ಹಾಗೂ ನನ್ನ ಗೆಳೆಯರಿಗೆ ಮಾತ್ರ ಗೊತ್ತಿದ್ದೆ. ಅಲ್ಲಿ ಕಂಪ್ಯೂಟರ್ ನಡುವೆ ನಮ್ಮ ಕೆಲಸ ಆಗುತ್ತಿತ್ತು. ಇಲ್ಲಿ ಜನರ ನಡುವೆ ಕೆಲಸ ಮಾಡುತ್ತಿದ್ದೇವೆ. ಜನರ ಜೊತೆ ಎಷ್ಟು ಮುಕ್ತವಾಗಿ ಇರಲು ಸಾಧ್ಯವಾಗುತ್ತೋ ಅಷ್ಟೇ ಮುಕ್ತವಾಗಿ ಕ್ಯಾಮೆರಾ ಎದುರಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಕ್ಯಾಮೆರಾ ಎದುರು ಪ್ರಜ್ಞಾಪೂರ್ವಕವಾಗಿ ವರ್ತಿಸುತ್ತೇವೆ. ಈಗ ಜನ ನನ್ನನ್ನು ಗುರುತಿಸುತ್ತಾರೆ. ಅಂದರೆ ಅದು ತುಂಬ ಖುಷಿ ಕೊಡುತ್ತದೆ. ಅವರ ಪ್ರೀತಿಯ ಅನುಭವ ಮಾತಿಗೆ ನಿಲುಕುವುದಿಲ್ಲ. ಹಾಗೆಂದು ಭ್ರಮೆಯ ಲೋಕದಲ್ಲಿ ಇಲ್ಲ. ಇಲ್ಲಿಯೂ ಕೂಡ ವಾಸ್ತವದ ಅರಿವು ನನಗೆ ಆಗಿದೆ. ಇದನ್ನೇ ನಂಬಿಕೊಂಡು ಭವಿಷ್ಯತ್ತಿನ ಬದುಕನ್ನು ರೂಪಿಸಿಕೊಳ್ಳಲು ಆಗುವುದಿಲ್ಲ. ಅನೇಕರು ಒಂದೇ ಒಂದು ಸೀರಿಯಲ್ ಮಾಡುತ್ತಾರೆ ಆಮೇಲೆ ಅವಕಾಶವೇ ಸಿಗುವುದಿಲ್ಲ. ನನಗೂ ಹಾಗಾದರೆ ಮತ್ತೆ ನಾನು ಟೆಕ್ಕಿ ಆಗಲು ಆಗುವುದಿಲ್ಲ. ಅಲ್ಲಿ ಸೀರಿಯಲ್ ಮಾಡುತ್ತಿದ್ದವನು ಮತ್ತೆ ಯಾಕೆ ಬಂದೆ ಎಂದರೆ ಮುಜುಗರ ಆಗುತ್ತದೆ. ಮೊದಲ ಧಾರಾವಾಹಿಯ ನಂತರ ಒಂದು ವರ್ಷ ನನಗೆ ಯಾವುದೇ ಧಾರಾವಾಹಿ ಸಿಕ್ಕಿರಲಿಲ್ಲ. ಅನಿಶ್ಚಿತತೆ ಇಲ್ಲಿ ಇದ್ದೇ ಇರುತ್ತದೆ. ಅದೃಷ್ಟ ಮತ್ತು ಕಠಿಣ ಪರಿಶ್ರಮ ನಮ್ಮ ಉನ್ನತಿಗೆ ಕಾರಣವಾಗುತ್ತದೆ. ಆದರೂ ನಮ್ಮ ಜೀವನೋಪಾಯಕ್ಕೆ ಬೇರೆ ಏನಾದರೂ ಇದ್ದರೆ ಮಾನಸಿಕ ಒತ್ತಡ ಇರುವುದಿಲ್ಲ. ಇದನ್ನೇ ನಾನು ಬೇರೆಯವರಿಗೂ ಹೇಳುತ್ತೇನೆ. ಆ ಕಾರಣಕ್ಕೆ ಬೆಂಗಳೂರಿನ ಬಿಟಿಎಂ ಲೇಔಟ್‌ನಲ್ಲಿ ಒಂದು ರೆಸ್ಟೋರೆಂಟ್ ಮಾಡಿದ್ದೇನೆ.

◆ **ನಟರಾಗಿ ನಿಮಗೆ ಯಾವ ರೀತಿ ಕಥೆ– ಪಾತ್ರ ಇದ್ದರೆ ಚೆನ್ನಾಗಿರುತ್ತದೆ?**

ಸಾಮಾನ್ಯವಾಗಿ ಧಾರಾವಾಹಿ ಪ್ರಿಯರಿಗೆ ಹೊಡೆದಾಟ ಬಡಿದಾಟ ಇಷ್ಟ ಆಗಲ್ಲ. ಅವರಿಗೆ ಕಥೆ ರಮ್ಯವಾಗಿರಬೇಕು. ಅದನ್ನೇ ಅವರು ಬಯಸುತ್ತಾರೆ. ಅದಕ್ಕಾಗಿ ಪ್ರೀತಿ ಪ್ರಣಯದ ಕಥೆಯ ಹಾದಿಯ ಪಯಣ ಇಷ್ಟ. ಸಿನಿಮಾ ವಿಷಯಕ್ಕೆ ಬಂದರೆ ವೈಯಕ್ತಿಕವಾಗಿ ಬೇರೆಯ ಬಯಕೆ ಇದೆ. ಈಗ ಕೆಲವು ಸಿನಿಮಾ ಅವಕಾಶ ಬಂದಿವೆ. ಸಿನಿಮಾದಲ್ಲಿ ಸಸ್ಪೆನ್ಸ್ ಥ್ರಿಲರ್ ಕಥೆ ಇರಬೇಕು. ಏನೋ ಇದೆ ಎನ್ನುವ ಕುತೂಹಲವನ್ನು ಕಥೆ ವೀಕ್ಷಕನನ್ನು ಹಿಡಿದಿಡಲು ಸಹಕಾರಿ.

■ **ರಾಘವೇಂದ್ರ ಕೆ.**